3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ.
ಸಿ.ಸಿ.ಃ 58/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಕೃಷ್ಣೇಗೌಡ | ಸಿಡಬ್ಲ್ಯೂ -7 |
| ತಂದೆ/ಗಂಡನ ಹೆಸರು | ಃ | ರಂಗೇಗೌಡ | ಪಿ ಡಬ್ಲ್ಯೂ3 |
| ವಯಸ್ಸು | ಃ | 55 ವರ್ಷ | |
| ಉದ್ಯೋಗ | ಃ | ವ್ಯವಸಾಯ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಯಾಳೇನಹಳ್ಳಿ | ದಿನಾಂಕಃ 21-02-2019 |

ಕಲಂ 299 ಸಿ ಆರ್ ಪಿ ಸಿ ಅಡಿಯಲ್ಲಿ ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದಃ

ನಿಪಿ-2 ಅಮಾನತ್ ಮಹಜರ್ ಮೇಲೆ ಇರುವ ಸಹಿ ನನ್ನದೇ ಆಗಿದೆ. ಸಾಕ್ಷಿ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು . ನಿಪಿ-2 ಕ್ಕೆ ದಿನಾಂಕ 21-1-2012 ರಂದು ಹಿರಿಸಾವೆ ಪೋಲಿಸ್ ಠಾಣೆಯ ಒಳಭಾಗದಲ್ಲಿ ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ಸಹಿ ಮಾಡಿದ್ದೇನೆ . ಪೋಲಿಸರು ನನ್ನನ್ನು ಠಾಣೆಗೆ ಬರಮಾಡಿಕೊಂಡು ಮೂರು ಜನ ಆರೋಪಿತರನ್ನು ತೋರಿಸಿದ್ದು ನಂತರ 1 ನೇ ಆರೋಪಿಯ ಹತ್ತಿರ ಇದ್ದ ಪರ್ಸನಿಂದ ಒಂದೆಳೆ ಚಿನ್ನದ ಚೆಕ್ ನ್ನು , ಸದರಿ ಪರ್ಸನ್ನು ಹಾಗೂ ವ್ಯಾನಿಟಿ ಬ್ಯಾಗ್‌ನ್ನು ಪೋಲಿಸರು ಅಮಾನತ್ ಪಡಿಸಿಕೊಂಡಿರುತ್ತಾರೆ . ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ-5, 6 ಮತ್ತು 8 ರವರು ಸಹಿ ಮಾಡಿದ್ದಾರೆ . ಠಾಣೆಯಲ್ಲಿ ಪೋಲಿಸರು ತೋರಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ .

ಪಾಟೀ ಸವಾಲು ಃ ಇಲ್ಲ .

ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಸ.ಇ.ಎ.ಒ.,

3ನೇ ಅಧಿಕ ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ